DITTO WS

Reg. No. : ..................................

Name : ......................................

# S-2216

**SECOND YEAR HIGHER SECONDARY**
**SAY / IMPROVEMENT EXAMINATION, JUNE – 2023**

Part – III
**KANNADA**
Maximum : 80 Scores

Time : **2½** Hours
Cool-off time : **15** Minutes

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ **15** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**(1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.)** **(4 × 1 = 4)**

1. 'ಕನ್ನಡದ ಆದಿಕವಿ' ಎಂಬ ಬಿರುದಿಗೆ ಪಾತ್ರನಾದ ಕವಿ ಯಾರು ?

   (ಹರಿಹರ, ಲಕ್ಷ್ಮೀಶ, ಪಂಪ, ಮುದ್ದಣ)

2. "ನಾನಿಷ್ಟು ನಿನ್ನಿಂದ ಹಿರಿಯನಾದುದರಿಂದ ಸೇನೆಗೆ ಬರವೇಳ್ವನ್ನೆಸೆ" – ಈ ಮಾತನ್ನು ಹೇಳಿದವರು ಯಾರು ?

   (ಭರತ, ಬಾಹುಬಲಿ, ಮಕ್ಕಳು, ರಾಜರು)

3. 'ಹರಳುಗಟ್ಟಿದ ಬಗೆ' ಪಾಠವು ಯಾವ ಸಾಹಿತ್ಯ ಪ್ರಕಾರಕ್ಕೆ ಸೇರುತ್ತದೆ ?

   (ಜೀವನಚರಿತ್ರೆ, ವಿಮರ್ಶೆ, ಆತ್ಮಕಥೆ, ಕಥೆ)

4. 'ಮಂಥರಾ' ನಾಟಕವನ್ನು ಬರೆದವರು ಯಾರು ?

   (ಜಿ.ಪಿ. ಬಸವರಾಜು, ಡಾ. ಎಚ್.ಎಸ್. ವೆಂಕಟೇಶಮೂರ್ತಿ, ಡಾ. ಅನುಪಮಾ ನಿರಂಜನ, ಸೇಡಿಯಾಪು ಕೃಷ್ಣಭಟ್ಟ)

DITTO
WS

**(5 ರಿಂದ 10 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.) (4 × 1 = 4)**

5. ಚಿತ್ತ – ಈ ಪದದ ಅರ್ಥವನ್ನು ಬರೆಯಿರಿ.

6. ಧರೆಯೆನಿತು – ಈ ಪದವನ್ನು ವಿಂಗಡಿಸಿ ಬರೆಯಿರಿ.

7. ಆಕಾಶ – ಈ ಪದದ ಎರಡು ಪರ್ಯಾಯ ಪದಗಳನ್ನು ಬರೆಯಿರಿ.

8. ಮಾತುಗಾರ – ಇದರಲ್ಲಿರುವ ತದ್ಧಿತ ಪ್ರತ್ಯಯವನ್ನು ಗುರುತಿಸಿ ಬರೆಯಿರಿ.

9. ಮುಖ, ವರ್ಣ – ಈ ಸಂಸ್ಕೃತ ಪದಗಳ ತದ್ಭವ ರೂಪಗಳನ್ನು ಬರೆಯಿರಿ.

10. ಒಪ್ಪು – ಈ ಪದದ ನಿಷೇದಾರ್ಥ ಪದವನ್ನು ಬರೆಯಿರಿ.

**(11 ರಿಂದ 17 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.) (5 × 2 = 10)**

11. ಕೆಳಗೆ ನೀಡಲಾದ ವಾಕ್ಯದಲ್ಲಿ ಅಡಿಗೆರೆ ಎಳೆದ ಶಬ್ದವನ್ನು ಬಳಸಿಕೊಂಡು ಬೇರೊಂದು ವಾಕ್ಯವನ್ನು ರಚಿಸಿರಿ.

    ನಾಟಕವು ಓದಿನ ಮೂಲಕ ಹಾಗೂ ರಂಗಪ್ರಯೋಗದ ಮೂಲಕ ಆಸ್ವಾದನೆಯನ್ನು ನೀಡಬಲ್ಲುದು.

12. ಕೆಳಗೆ ನೀಡಲಾದ ಮಿಶ್ರವಾಕ್ಯವನ್ನು ಎರಡು ಸರಳ ವಾಕ್ಯಗಳಾಗಿ ಬರೆಯಿರಿ.

    ನಮ್ಮ ಕಣ್ಮುಂದಿನ ಕಾಡು ಮರೆಯಾದರೂ ಬೃಹದಾಕಾರದ ಮರಗಳು ಬ್ರಹ್ಮರಾಕ್ಷಸರಂತೆ ಕಾಣಿಸುತ್ತಿದ್ದವು.

13. ಗ್ರಾಮ್ಯ ಭಾಷೆಯಲ್ಲಿರುವ ಕೆಳಗಿನ ಗದ್ಯಭಾಗವನ್ನು ಶಿಷ್ಟಗನ್ನಡಕ್ಕೆ ಪರಿವರ್ತಿಸಿರಿ.

    "ನಾಕೂ ಮಂದಿ ಮಕ್ಕಳಾ ಅಂತ ನಾಕೂ ಮಂದೀನೂ ಬಂಗಾರದ ಗದ್ದಿಗೀ ಮ್ಯಾಲೆ ಕೂಡ್ರಿಸೋ ಹಂಗಿಲ್ಲ"

14. ಅಡ್ಕ ಮತ್ತು ಪಾಡಿ – ಈ ಪದಗಳಿಂದ ಕೊನೆಗೊಳ್ಳುವ ಯಾವುದಾದರೂ ಎರಡೆರಡು ಸ್ಥಳನಾಮಗಳನ್ನು ಬರೆಯಿರಿ.

15. ಮಾದಕ ವಸ್ತುಗಳ ಬಳಕೆಯ ಅಪಾಯದ ಕುರಿತು ಜನಜಾಗೃತಿ ಮೂಡಿಸಲು ಸೂಕ್ತವಾದ ಎರಡು ಘೋಷಣಾ ವಾಕ್ಯಗಳನ್ನು ಬರೆಯಿರಿ.

16. “ಬೊಪ್ಪ ! ನೀನೊರೆವಂತೆ ರಿಸಿಗಳಾರುಂ ತನಗೆ ಕಾಣಿಸರ್; ಮಂಗ, ಕೋಡಗ ಮುಸುಡಿನವರಾರೋ ಇರ್ವರ್ ತನ್ನಿದಿರ್ಗೆ ನಿಂದಂತೆ ತೋರ್ಪುದು” – ‘ಶ್ರೀಮತಿ ಸ್ವಯಂವರ ’ ಪಾಠದಲ್ಲಿ ಬಂದಿರುವ ಈ ಮಾತಿನ ಸಂದರ್ಭವನ್ನು ಬರೆಯಿರಿ.

17. ಪಂಚದ್ರಾವಿಡ ಭಾಷೆಗಳು ಯಾವುವು ? ಹೆಸರಿಸಿರಿ.

**(18 ರಿಂದ 22 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ.)** **($4 \times 4 = 16$)**

18. ಕೆಳಗೆ ನೀಡಲಾದ ‘ಉಲ್ಲಂಘಿಸುವರುಂಟೇ ವಿಧಿಕೃತವನು’ ಕಾವ್ಯಭಾಗದ ಸ್ವಾರಸ್ಯವನ್ನು ಬರೆಯಿರಿ.

ಸುತ್ತನೋಡುವಳೊಮ್ಮೆ ನೂಪುರವಲುಗದಂತೆ
ಹತ್ತೆ ಸಾರುವಳೊಮ್ಮೆ ಸೋಂಕಲೆಂತಹುದೆಂದು
ಮತ್ತೆ ಮುರಿದಪಳೊಮ್ಮೆ ಹಜ್ಜೆ ಹಜ್ಜೆಯ ಮೇಲೆ ಸಲ್ವಳಮ್ಮದೆನಿಲ್ವಳು
ಚಿತ್ತದೊಳ್ ನಿಶ್ಚೈಸಿ ನೆರೆಯಲೆಳಸುವಳೊಮ್ಮೆ
ಹೊತ್ತಲ್ಲದನುಚಿತಕೆ ಬೆದರಿ ಹಿಂಗುವಳೊಮ್ಮೆ
ತತ್ತಳದ ಬೇಟದೊಳ್ ಬೆಂಡಾಗಿ ವಿಷಯೆ ನಿಂದಿರ್ದಳಾತನ ಪೊರೆಯೊಳು

19. ನಿಮ್ಮ ಶಾಲೆಯಲ್ಲಿ ನೀವು ಪ್ರದರ್ಶಿಸಲಿರುವ ‘ಮಂಥರಾ’ ನಾಟಕದ ಪ್ರಚಾರಕ್ಕಾಗಿ ಕರಪತ್ರವೊಂದನ್ನು ಸಿದ್ಧಪಡಿಸಿರಿ.

20. ‘ಏರಿದ ಹೆಡೆಯಿಳಿವಂತೆ ಮುನ್ನಿನ ಗರ್ವ ಜಾರಿತು’ –

ಮೇಲೆ ನೀಡಲಾದ ವಾಕ್ಯದಲ್ಲಿ ಬಳಕೆಯಾದ ಅಲಂಕಾರವನ್ನು ಗುರುತಿಸಿ ಲಕ್ಷಣವನ್ನು ಬರೆಯಿರಿ.

21. ‘ಇಡ್ಲಿ’ ಪದದ ಹುಟ್ಟು ಹಾಗೂ ವಿಕಾಸದ ಕುರಿತು ಲಘು ಟಿಪ್ಪಣಿ ಬರೆಯಿರಿ.

22. ಶ್ರೀಕೃಷ್ಣನು ಅಗ್ರಪೂಜೆಗೆ ಯೋಗ್ಯನಾದವನು ಎಂಬುದಕ್ಕೆ ಭೀಷ್ಮರು ನೀಡಿದ ಕಾರಣಗಳೇನು ? ಬರೆಯಿರಿ.

DITTO
WS

**(23 ರಿಂದ 28 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.)** **(5 × 6 = 30)**

23. 'ಧರೆ ಮೆಚ್ಚದಣ್ಣ ಸೋದರರ ಕಾಳಗಕೆ' ಕಾವ್ಯಭಾಗದಲ್ಲಿ ಮೂಡಿಬಂದಿರುವ ಭರತನ ಪಾತ್ರಚಿತ್ರಣ ಮಾಡಿರಿ.

24. ನಾರದ ಹಾಗೂ ಪರ್ವತರ ಸ್ವಾರ್ಥ ಮನೋಭಾವದಿಂದಾಗಿ ಶ್ರೀಮತಿಯನ್ನು ವರಿಸುವ ಅವಕಾಶ ತಪ್ಪಿಹೋದ ಪ್ರಸಂಗವು 'ಶ್ರೀಮತಿ ಸ್ವಯಂವರ' ಕಾವ್ಯಭಾಗದಲ್ಲಿ ಹೇಗೆ ಸ್ವಾರಸ್ಯಕರವಾಗಿ ಚಿತ್ರಿಸಲಾಗಿದೆ ? ಬರೆಯಿರಿ.

25. ಅನುಪಮಾ ನಿರಂಜನ ಅವರು ತಮ್ಮ ಜೀವನದಲ್ಲಿ ಎದುರಾದ ಎಲ್ಲ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಿ ಯಶಸ್ವಿಯಾದ ಬಗೆಯನ್ನು ವಿವರಿಸಿ ಬರೆಯಿರಿ.

26. 'ತುಳು ಸಾಹಿತ್ಯಕ್ಕೆ ಪ್ರಾಚೀನ ಇತಿಹಾಸವಿದೆ' – ಈ ಹೇಳಿಕೆಯನ್ನು 'ಪ್ರಾಚೀನ ತುಳು ಸಾಹಿತ್ಯ' ಪಾಠದ ಆಧಾರದಲ್ಲಿ ಸಮರ್ಥಿಸಿ ಬರೆಯಿರಿ.

27. ಸಹ್ಯಾದ್ರಿ ಪರ್ವತ ಶ್ರೇಣಿಗಳಲ್ಲಿ ಚಾರಣ ನಡೆಸಿದ ಲೇಖಕರ ಅನುಭವವನ್ನು 'ಕಾಡಿಗೆ ಹೊದ್ದಿಸಿದ ಮಂಜಿನ ಪರದೆ' ಪಾಠದ ಆಧಾರದಲ್ಲಿ ಸಂಕ್ಷಿಪ್ತವಾಗಿ ಬರೆಯಿರಿ.

28. ಇಳೆಯಾಂಡ ಗುಡಿಮಾರನ ಭಕ್ತಿ ಹಾಗೂ ದಾನಗುಣಗಳ ವಿಶೇಷತೆಗಳನ್ನು ಬರೆಯಿರಿ.

**(29 ರಿಂದ 31 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.)** **(2 × 8 = 16)**

29. ಭರತನಿಗೆ ಯುವರಾಜ ಪಟ್ಟ ದೊರೆಯುವಂತೆ ಮಾಡಲು ಮಂಥರೆಯು ತೋರಿದ ಬುದ್ಧಿವಂತಿಕೆಯು 'ಮಂಥರಾ' ನಾಟಕದಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ ಬರೆಯಿರಿ.

30. ಚಂದ್ರಹಾಸನನ್ನು ಕೊಲ್ಲಲು ದುಷ್ಟಬುದ್ಧಿಯು ಮಾಡಿದ ಪ್ರಯತ್ನವು ಹೇಗೆ ವಿಫಲವಾಯಿತು ? ವಿವರಿಸಿ ಬರೆಯಿರಿ.

31. ಶಿಶುಪಾಲನು ತನ್ನ ಅಹಂಕಾರ, ಅಸಹನೆಗಳಿಂದಾಗಿ ನಾಶವಾದ ಸನ್ನಿವೇಶವು 'ಸಲಿಸುವೆಂ ನೂರುವರಂ' ಕಾವ್ಯಭಾಗದಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿ ಬರೆಯಿರಿ.

---